ಇ) ೧೯೮೫-೮೬ನೇ ಸಾಲಿಗೆ ಕಂಪೆನಿಯು ೩೦೦೦ ಮೆ.ಟನ್ ಉತ್ಪಾದನೆಯ ಗುರಿಯನ್ನು ಹೊಂದಿದ್ದು, ೧೫೧೭ ಮೆ.ಟನ್ ಉತ್ಪಾದನೆಯನ್ನು ಸಾಧಿಸಲಾಗಿದೆ. ಈ ಪೈಕಿ ಒಟ್ಟು ೧೧೨೫ ಮೆ.ಟನ್ ಪೈಪುಗಳನ್ನು, ೧೮೨ ಬೇಡಿಕೆಗಳ ಮೇರೆಗೆ ವಿವಿಧ ಖಾಸಗಿ ವ್ಯಾಪಾರಿಗಳಿಗೆ, ಕರ್ನಾಟಕ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಮತ್ತು ಲೋಕೋಪಯೋಗಿ ಇಲಾಖೆಗಳಿಗೆ ಮಾರಾಟ ಮಾಡಿದೆ.

ಕಲಘಟಗಿಯಲ್ಲಿ ವಲಯ ಅರಣ್ಯಾಧಿಕಾರಿಗಳ ಕಛೇರಿ ಕಟ್ಟಡ ಕಟ್ಟುವ ಕ್ರಮದ ಬಗ್ಗೆ

೬೭ (೪೩೭) ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ).—ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ :—

ಕಲಘಟಗಿಯಲ್ಲಿ ಅರಣ್ಯ ವಲಯ ಅಧಿಕಾರಿಗಳ ಕಛೇರಿಗೆ ಸ್ವಂತ ಕಟ್ಟಡ ಕಟ್ಟಲು ಸರಕಾರದವರು ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಜೆ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು). —

ಕ್ರಮ ಕೈಗೊಳ್ಳುವ ಪ್ರಮೇಯವಿಲ್ಲ.

ರಾಜ್ಯದಲ್ಲಿ ಪದವೀಧರ ಪಶುವೈದ್ಯರ ಪಶು ಚಿಕಿತ್ಸಾಲಯಗಳ ಬಗ್ಗೆ

೬೮ (೪೨೧) ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ).—ಮಾನ್ಯ ರೇಷ್ಮೆ, ಪಶುಸಂಗೋಪನೆ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಪದವೀಧರ ಪಶುವೈದ್ಯ ಶಾಲೆಗಳು ಎಷ್ಟು ?

ಆ) ಕಲಘಟಗಿ ತಾಲ್ಲೂಕಿನಲ್ಲಿ (೧) ದುಮ್ಮವಾಡ (೨) ಮುತ್ತಗಿ (೩) ನೂಲ್ವಿಗಳಲ್ಲಿ ಸದರಿಪಶು ವೈದ್ಯ ಶಾಲೆಗಳನ್ನು ಸ್ಥಾಪಿಸಲಾಗುವುದೆ ?

ಶ್ರೀ ಕೆ.ಎಂ. ಕೃಷ್ಣ ರೆಡ್ಡಿ, (ರೇಷ್ಮೆ, ಪಶುಸಂಗೋಪನೆ, ಮತ್ತು ಮೀನುಗಾರಿಕೆ ಸಚಿವರು).—

ಅ) ರಾಜ್ಯದಲ್ಲಿನ ಒಟ್ಟು ಪದವೀಧರ ಪಶುವೈದ್ಯ ಶಾಲೆಗಳು ೫೨೫ ಧಾರವಾಡ ಜಿಲ್ಲೆಯಲ್ಲಿ ೪೩.

ಆ) ಸದರಿ ಗ್ರಾಮಗಳ ೧೦ ಅಂಶಗಳ ಮಾಹಿತಿಯನ್ನು ಕರೆಯಲಾಗಿದೆ. ಈ ಬಗ್ಗೆ ವರದಿ ಬಂದ ನಂತರ ಪರಿಶೀಲಿಸಲಾಗುವುದು.

ಗೇರು ಹಣ್ಣಿನ ರಸ ತಯಾರಿಸುವ ಬಗ್ಗೆ

೬೯ (೭೦) ಶ್ರೀ ಜೆ.ಎಸ್. ಆಚಾರ್ (ಬೈಂದೂರು).—ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ಸರ್ಕಾರದ ಅರಣ್ಯ ಇಲಾಖೆ ಮತ್ತು ಗೇರು ಅಭಿವೃದ್ಧಿ ನಿಗಮ ತೋಟಗಾರಿಕಾ ಇಲಾಖೆ ವಿವಿಧ ಸಂಸ್ಥೆಗಳು ಹಾಗೂ ಖಾಸಗಿಯವರ ಪಶ ಇರುವ ಸಹಸ್ರಾರು ಎಕರೆ ಗೇರು ತೋಟಗಳಲ್ಲಿ ಉತ್ಪನ್ನವಾಗುವ ಗೇರು ಹಣ್ಣು ವ್ಯರ್ಥವಾಗುತ್ತಿದ್ದು ಈ ಹಣ್ಣಿನಿಂದ ರಸ ತೆಗೆದು ಪರಿಷ್ಕರಿಸಿ ಮೂರು ಕಟ್ಟೆಗೆ ತರುವ ಘಟಕ ಸ್ಥಾಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಆ) ಹಾಗಿದ್ದಲ್ಲಿ ಯಾವಾಗ ?

ಇ) ಇಂಥ ಘಟಕಗಳನ್ನು ಖಾಸಗೀ ವಲಯದಲ್ಲಿ ಸ್ಥಾಪಿಸಲು ಅನುಮತಿ ನೀಡಲಾಗಿದೆಯೇ? ಹಾಗಿದ್ದಲ್ಲಿ ಎಷ್ಟು ? ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದವರ ಧೋರಣೆ ಏನು ?

ಶ್ರೀ ಜೆ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಪರಿಷ್ಕರಣ ಘಟಕ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಪರಿಶೀಲನೆಯಲ್ಲಿರುವುದರಿಂದ ಉದ್ಭವಿಸುವುದಿಲ್ಲ.

ಇ) ಖಾಸಗೀ ವಲಯದಲ್ಲಿ ಘಟಕವನ್ನು ಸ್ಥಾಪಿಸುವ ವಿಚಾರವಿಲ್ಲ.